# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 66-2013

| | | | |
|---|---|---|---|
| ಸಾಕ್ಷಿದಾರರ ಹೆಸರು | ಮಲ್ಲಿಕಾರ್ಜುನ | P.W | 28 |
| ತಂದೆಯ ಹೆಸರು | ರಂಗೇಗೌಡ | C.W | 52 |
| ವಯಸ್ಸು | 47 ವರ್ಷ | | |
| ಉದ್ಯೋಗ | ಹೆಚ್.ಸಿ. ಸಕಲೇಶಪುರ ನಗರ ಠಾಣೆ | ಪ್ರ.ವ.ಬೋ | |
| ವಾಸಸ್ಥಳ | ಸಕಲೇಶಪುರ | ದಿನಾಂಕಃ 22-02-2023 | |

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು 2019 ನೇ ಇಸವಿಯಿಂದ ಇಲ್ಲಿಯವರೆಗೂ ಸಕಲೇಶಪುರ ನಗರ ಪೋಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತೀದ್ದೇನೆ. ದಿನಾಂಕಃ 06.04.2011 ರಂದು ಚಾಸಾ.54 ರವರು ನನ್ನನ್ನು ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿಯನ್ನು ಪಡೆದುಕೊಂಡು ಬರಲು ನೇಮಿಸಿದ್ದರು ಅದರಂತೆ ನಾನು ದಿನಾಂಕಃ 07.04.2011 ರಂದು ವರದಿಯನ್ನು ಪಡೆದುಕೊಂಡು ಅದೇ ದಿನ ಸಂಜೆ ಚಾಸಾ.54 ರವರಿಗೆ ವರದಿಯನ್ನು ನೀಡಿರುತ್ತೇನೆ. ಸದರಿ ವರದಿಯನ್ನು ಸೀಲ್ ಮಾಡಲಾಗಿತ್ತು. ಸಾಕ್ಷಿ ಸದರಿ ಸೀಲ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.76 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ವೈ. ಡಿ. ಆರ್. ವಕೀಲರಿಂದಃ-**

ನಾನು ಪ್ರಯೋಗಾಲಯಕ್ಕೆ ಹೋದ ಬಗ್ಗೆ ಠಾಣೆಯಿಂದ ಪಾಸ್ ಪೋರ್ಟ್ ಪಡೆದಿರುತ್ತೇನೆ. ಬೆಳಗ್ಗೆ 6 ಗಂಟೆಗೆ ಸಕಲೇಶಪುರದಿಂದ ಹೊರಟೆನು. ಪಾಸ್ ಪೋರ್ಟ್ ನ್ನು ಹಾಜರುಪಡಿಸಿರುತ್ತೇವೆ. ಪಾಸ್ ಪೋರ್ಟ್ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಯಾವ ದಾಖಲೆಯ ಬಗ್ಗೆ ವರದಿ ಪಡೆದುಕೊಂಡಿರಿ ಎಂದರೆ ಸಾಕ್ಷಿ ವರದಿಯನ್ನು ಸೀಲ್ ಮಾಡಲಾಗಿತ್ತು ಆದಕಾರಣ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ.76 ರ ಸೀಲ್ ನಲ್ಲಿ ಅದನ್ನು ಯಾರಿಗೆ ನೀಡಲಾಗಿದೆ ಎಂಬ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ . ನಾನು ಪ್ರಯೋಗಾಲಯಕ್ಕೆ ಹೋಗಿಲ್ಲ ಹಾಗೂ ಯಾವುದೇ ವರದಿಯನ್ನು ಪಡೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಗೆ ಸಂಜೆ 7 ಗಂಟೆಗೆ ಮರಳಿ ಬಂದೆನು. ನನ್ನ ಮೇಲಾಧಿಕಾರಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಓ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಸಕಲೇಶಪುರ.